# ಅಸಹಕಾರ: ಗುರಿ ಮತ್ತು ದಾರಿ

**ಕನ್ನಡಕ್ಕೆ: ಸದಾನಂದ ಆರ್.**

ನಾವು ಬ್ರಿಟಿಷ್ ಸರ್ಕಾರದ ವಿರುದ್ಧ ಚಲಾಯಿಸಿರುವ ಅಸಹಕಾರ ತತ್ತ್ವವನ್ನೇ ಇನ್ನೂ ಕೆಲವು ವಿಷಯಗಳಿಗೂ ಅನ್ವಯಿಸಬಹುದು. ಒಂದು ವ್ಯವಸ್ಥೆಯನ್ನು ಮುಂದುವರಿಸಲು ಜನರು ಸಿದ್ಧರಿಲ್ಲದೇ ಹೋದಲ್ಲಿ, ಆ ವ್ಯವಸ್ಥೆಯ ಅಡಿಪಾಯವೇ ಬಿದ್ದುಹೋಗುವುದರಿಂದ, ಅದು ಸಂಪೂರ್ಣವಾಗಿ ನಾಶವಾಗುತ್ತದೆ. ಹಾಗೆಯೇ, ದುಷ್ಟ ಆಚರಣೆಗಳನ್ನು ಅಂತ್ಯಗೊಳಿಸಬೇಕೆಂದು ಇಚ್ಛಿಸಿ ಅದಕ್ಕೆ ಸಂಪೂರ್ಣ ಅಸಹಕಾರವನ್ನು ತೋರಿದಲ್ಲಿ, ಆ ಕೇಡಿನ ಸಾಮ್ರಾಜ್ಯ ಬಹು ಬೇಗನೆ ಕುಸಿದುಹೋಗುತ್ತದೆ...

ನಾನು ಹೀಗೆ ಹೇಳಿದಾಗ ಕೆಲವು ಪ್ರಶ್ನೆಗಳು ಸಹಜವಾಗಿ ಮೂಡಿ ಬರುತ್ತವೆ: ಒಬ್ಬ ವ್ಯಕ್ತಿಯ ಅಸಹಕಾರದಿಂದ ಏನು ಪ್ರಯೋಜನವಾಗುತ್ತದೆ? ಯಾವ ರೀತಿಯ ಪರಿಣಾಮವನ್ನು ಬೀರಲು ಸಾಧ್ಯವಿದೆ? ಈ ಪ್ರಶ್ನೆಗಳಿಗೆ ಈ ರೀತಿಯ ಉತ್ತರವನ್ನು ನೀಡಬಹುದು: ಒಬ್ಬ ವ್ಯಕ್ತಿಯು ತನ್ನ ಅಸಹಕಾರವನ್ನು ತೋರುವುದರ ಮೂಲಕ ಆತನು ಮೊದಲು ದೋಷದಿಂದ ಮುಕ್ತನಾಗುತ್ತಾನೆ; ಓರ್ವನ ಅಸಹಕಾರವು ವ್ಯವಸ್ಥೆಯ ಕುಸಿತದ ಮೊದಲ ನಡೆಯಾಗುತ್ತದೆ. ಕೇವಲ ಒಂದು ಇಟ್ಟಿಗೆಯನ್ನು ಮನೆಯೊಂದರ ಕಟ್ಟಡದಿಂದ ಹೊರಗೆಳೆದಾಗ, ಇಡೀ ಮನೆಯು ಕುಸಿಯುವ ಯಾವುದೇ ಅವಕಾಶವಿಲ್ಲ ಎನ್ನುವುದು ಸತ್ಯವೇ. ಆದರೆ, ಒಂದು ಇಟ್ಟಿಗೆಯ ಕೊರತೆಯಿಂದಾಗಿ, ನೋಡುವವರಿಗೆ ಮನೆಯು ಶಿಥಿಲಗೊಳ್ಳಲು ಆರಂಭಿಸಿದೆ ಎನ್ನುವ ವಿಷಯವಂತೂ ಅರಿವಾಗುತ್ತದೆ. ಮನೆಯೊಂದರ ಕಟ್ಟಡದಿಂದ ಮೊದಲ ಇಟ್ಟಿಗೆಯನ್ನು ಹೊರಗೆಳೆಯುವುದು ತುಸು ಕಷ್ಟವಾದ ವಿಷಯವಾದರೂ, ಎರಡನೆಯ ಇಟ್ಟಿಗೆಯನ್ನು ಹೊರಗೆಳೆಯುವುದು ಮೊದಲಿನಷ್ಟು ಕಷ್ಟವನ್ನು ಸೃಷ್ಟಿಸುವುದಿಲ್ಲ.

ಜಗತ್ತಿನಲ್ಲಿ ಇದುವರೆಗೂ ಉಂಟಾಗಿರುವ ಎಲ್ಲಾ ಸುಧಾರಣೆಗಳು ಒಬ್ಬ ವ್ಯಕ್ತಿಯ ಶ್ರಮದಿಂದ ಆರಂಭವಾದ ಕಾರ್ಯಗಳಾಗಿವೆ. ಬಾಲ್ಯ ವಿವಾಹದಂತಹ ಕೆಟ್ಟ ವ್ಯವಸ್ಥೆಗಳ ವಿರುದ್ಧವಾದ ಸನ್ನಿವೇಶವಂತೂ ಇಂದು ಸೃಷ್ಟಿಯಾಗಿದೆ. ಆದರೆ, ಇಂತಹ ಆಚರಣೆಗಳನ್ನು ಕೆಡುಕಿನ ಆಚರಣೆಗಳೆಂದು ಪ್ರತಿಪಾದಿಸುವವರು ಅವುಗಳ ವಿರುದ್ಧ ಯಾವುದೇ ಕ್ರಿಯೆಗೆ ಮುಂದಾಗುತ್ತಿಲ್ಲ. ಇಂದು ನಾವೇನಾದರೂ ಈ ಎಲ್ಲಾ ಆಚರಣೆಗಳ ಕುರಿತು ಸಾರ್ವಜನಿಕರ ಅಭಿಪ್ರಾಯ ಸಂಗ್ರಹಿಸಿದರೆ, ಬಹುತೇಕರು ಇವೆಲ್ಲವೂ ಅನಿಷ್ಟದ ಆಚರಣೆಗಳೆಂದು ಖಂಡಿತ ತಮ್ಮ ಅಭಿಪ್ರಾಯವನ್ನು ನೀಡುತ್ತಾರೆ. ಇಷ್ಟೆಲ್ಲಾ ವಿರೋಧವಿದ್ದರೂ, ಈ ಎಲ್ಲಾ ಆಚರಣೆಗಳು ಈಗಲೂ ಜೀವಂತವಿರುವುದಕ್ಕೆ ವಿರೋಧಿಸುವವರ ದೌರ್ಬಲ್ಯವೇ ಕಾರಣವಾಗಿದೆ. ವಿರೋಧಿಸುವವರು ದುಷ್ಟ ಆಚರಣೆಗಳ ವಿರುದ್ಧ ಕ್ರಮ ಜರುಗಿಸುವಲ್ಲಿ ಸೋತಿದ್ದಾರೆ. ಕೇವಲ ಮಾತನಾಡುವುದರಲ್ಲಿ ಕಾಲ ಕಳೆಯುವ ಇವರು, ತಮ್ಮ ಮಾತುಗಳನ್ನು ನಿರ್ಧಾರದಿಂದ ಜಾರಿ ಹಂತಕ್ಕೆ ತರುವಲ್ಲಿ ವಿಫಲರಾಗಿದ್ದಾರೆ. ಬಹುಸಂಖ್ಯಾತರು ಇಂತಹ ಆಚರಣೆಗಳಿಂದ ದೂರವಿರುವ ನಿರ್ಧಾರಕ್ಕೆ ಎಲ್ಲಿಯವರೆಗೂ ಬರುವುದಿಲ್ಲವೋ ಅಲ್ಲಿಯವರೆಗೆ ಇಂತಹ ಹೇಡಿತನ ಉಳಿದಿರುತ್ತದೆ.

(ಮಾರ್ಚ್ 14, 1926)